ಎಸ್. ರಾಘವೇಂದ್ರರಾವ್, ಕೆ.ವಿ.ಎನ್., ಓ.ಎಲ್.ಎನ್, ಎಚ್.ಎಸ್. ಶಿವಪ್ರಕಾಶ್, ರಹಮತ್ ತರೀಕೆರೆ, ನಟರಾಜ್ ಹುಳಿಯಾರ್, ಕೇಶವ ಮಳಗಿ, ಎಸ್.ಎಫ್. ಯೋಗಪ್ಪನವರ್, ಜಯಂತ ಕಾಯ್ಕಿಣಿ ಮುಂತಾದವರು ಹೊಸತಲೆಮಾರಿನ ಕೃತಿಗಳಿಗೆ ಮುನ್ನುಡಿ, ಬೆನ್ನುಡಿಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಕೆಲವು ಅಧ್ಯಯನಪೂರ್ಣ ಬರಹಗಳಾಗಿಯೂ ಕಾಣುತ್ತವೆ. ಆದರೆ ಇವರು ಹೇಳಿರುವ ಎಲ್ಲ ಮಾತುಗಳನ್ನು ಒಪ್ಪಿಕೊಳ್ಳಬೇಕು ಎಂಬುದೂ ನನ್ನ ನಿಲುವಲ್ಲ. ಇಂತಹ ಕೆಲವು ಮುನ್ನುಡಿಗಳಲ್ಲಿ ಹೊಸತಲೆಮಾರಿನ ಬರಹದ ತಾತ್ವಿಕತೆ ಮತ್ತು ಭಾಷಿಕ ಬಳಕೆಯಲ್ಲಿ ಇಡಬೇಕಾದ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಹೇಳಲಾಗಿದೆ. ಸಮಸ್ಯೆ ಇರುವುದು ಹೊಸಬರು ಇವುಗಳನ್ನು ಸಮಗ್ರವಾಗಿ ಗ್ರಹಿಸದೇ ಇರುವುದು. ಮತ್ತೊಂದು, ಮುನ್ನುಡಿಗಳಲ್ಲಿ ಹೊಗಳಿಕೆಯ ಮಾತುಗಳನ್ನು ಮಾತ್ರ ಸ್ವೀಕರಿಸಿ ಸಲಹೆಗಳನ್ನು ಗಾಳಿಗೆ ತೂರಿರುವುದು. ಇಷ್ಟೇ ಅಲ್ಲದೇ, ಕೆಲವು ಬರಹಗಾರರು ತಮ್ಮ ಮೊದಲ ಕೃತಿಗಳ ಬಳಿಕ ಪ್ರಕಟಿಸಿದ ಬರಹಗಳಲ್ಲಿ ಯಾವ ಹೊಸ ಹುಡುಕಾಟಗಳಿವೆ ಎಂಬುದನ್ನು ಕಾಣಲು ತಡಕಾಡಬೇಕು. ಎರಡನೇ ಸಂಕಲನ ಅಥವಾ ಮೂರನೇ ಸಂಕಲನಕ್ಕೋ ತಮ್ಮ ಖಾಲೀತನವನ್ನು (ಕಾವ್ಯ ಮತ್ತು ಕತೆ) ತಾವೇ ಅರ್ಥಮಾಡಿಕೊಳ್ಳುತ್ತಿಲ್ಲ. ಬಹುಶಃ ಇಲ್ಲಿಯೇ ಹೊಸಬರು ದಿಕ್ಕುತಪ್ಪುತ್ತಿದ್ದಾರೆ ಎನಿಸುತ್ತದೆ. ಮೊದಲ ಬರಹಗಳ ನಂತರ ಬದುಕಿನ ಶೋಧವನ್ನು ಹೇಗೆ ನಡೆಸಬೇಕು? ಲೋಕವನ್ನು ಗ್ರಹಿಸುವುದಕ್ಕೆ ಬೇಕಾದ ಭಾಷಿಕ ನುಡಿಗಟ್ಟುಗಳೇನು? ಮುಂತಾದ ಪ್ರಶ್ನೆಗಳನ್ನು ಬಹಳಷ್ಟು ಬರಹಗಾರರು ಮರೆತು ಸರಣಿರೂಪದಲ್ಲಿ ಕೃತಿಗಳನ್ನು ಪ್ರಕಟಿಸುತ್ತಾರೆ. ಈ ಬರಹಗಾರರ ಮತ್ತೊಂದು ಭ್ರಮೆ ಎಂದರೆ ಮೇಲೆ ಹೆಸರಿಸಿದ ಹಿರಿಯರು ಬರೆದ ತಕ್ಷಣ ನಾನು ಮತ್ತು ನನ್ನ ಕೃತಿ ಕನ್ನಡ ಸಾಹಿತ್ಯಲೋಕದಲ್ಲಿ ಅಧಿಕೃತ ಸ್ಥಾನ ಪಡೆದುಕೊಂಡಿದೆ ಎಂದು ಭಾವಿಸುವುದು.

5 ವಿಮರ್ಶೆಯಾಗಲೀ, ಸ್ಪಂದನವಾಗಲೀ ಒಬ್ಬ ಲೇಖಕನಿಗೆ ಒಂದು ಹಂತದ ತನಕ ಬೇಕಾಗುತ್ತದೆ. ಯಾವುದೇ ಲೇಖಕ ತನ್ನ ಮಿತಿಗಳನ್ನು ತಾನೇ ತನ್ನ ಕೃತಿಗಳ ಮೂಲಕ ಅರಿಯುವುದಕ್ಕೆ ಸಾಕಷ್ಟು ಸಾಧ್ಯತೆಗಳಿರುತ್ತವೆ. ಇದರ ನಂತರವೂ ಆತನಿಗೆ ನಿರೀಕ್ಷೆ ಮೀರಿ ವಿಮರ್ಶೆಗಿಂತ ಸ್ಪಂದನಗಳು ಸಿಕ್ಕರೆ, ತನ್ನ ಕೃತಿಗಳ ಗಟ್ಟಿತನವನ್ನು ಸೂಚಿಸುತ್ತಿರಬಹುದು. ವಿಮರ್ಶೆಯಿಂದ ಹೇಗೆ ಬದಲಾಗಬೇಕು? ಎಂಬುದನ್ನು ಆಯಾ ಲೇಖಕರೇ ಕಂಡುಕೊಳ್ಳಬೇಕು. ನನ್ನ ಕೃತಿಯ ಬಗ್ಗೆ ವಿಮರ್ಶೆ ಅಥವಾ ಪ್ರಶಸ್ತಿಗಳು ಸಿಗಲಿಲ್ಲವೆಂದ ಮಾತ್ರಕ್ಕೆ ಅದು ಕೆಟ್ಟದ್ದು ಎಂದುಕೊಳ್ಳುವುದು ಖಂಡಿತ ಸರಿಯಲ್ಲ. ನಮ್ಮ ಎಷ್ಟೋ ಪೂರ್ವಿಕ ಲೇಖಕರು 'ಇಂದು' ನಮಗೆ ತೆರೆದುಕೊಳ್ಳುತ್ತಿದ್ದಾರೆ. ಇಷ್ಟಾಗಿಯೂ ಸಾಂಸ್ಕೃತಿಕ ರಾಜಕಾರಣವೆಂಬುದು ಸದ್ದಿಲ್ಲದೇ ನಡೆಯುತ್ತಿರುವುದು ದುರಂತ. ಪ್ರಾಮಾಣಿಕ ಮತ್ತು ಗಟ್ಟಿಯಾದ ಬರಹ ನಿಗೂಢವಾಗಿ ಇರಲು ಇಷ್ಟಪಡುವುದಿಲ್ಲ. ಹೊಸಬರಿಗೆ ಬೇಕಾಗುವುದು ಮುಕ್ತತೆ ಮತ್ತು ವಿವೇಕ. ಇಂದು ಅನೇಕರು ನಮಗೆ ವಿಮರ್ಶೆಯ ನ್ಯಾಯಸಿಗುತ್ತಿಲ್ಲ ಎಂದು ಕೊರಗುತ್ತಿದ್ದಾರೆ; ದುರಂತವೆಂದರೆ ಹೀಗೆ ಕೊರಗುತ್ತಿರುವ ಬಹುತೇಕರು ಪತ್ರಿಕೆಗಳಿಂದ ಮತ್ತು ಪ್ರಶಸ್ತಿಗಳಿಂದ ಪ್ರಶಂಸೆ ಪಡೆದವರೇ ಆಗಿರುವುದು. ಕೆಲ ಹೊಸಬರು ಇದ್ಯಾವುದರ ಹಂಗಿಲ್ಲದೇ ತಮ್ಮ ಪಾಡಿಗೆ ತಾವು ಪ್ರಾಮಾಣಿಕವಾಗಿ ಬರೆಯುತ್ತಿದ್ದಾರೆ.